ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು
ಸಿ.ಸಿ. **518/2019**

ಸಿ.ಡಬ್ಲ್ಯೂ **-2,** ಪಿ.ಡಬ್ಲ್ಯೂ **-2**

ದಿಃ **11.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ರವಿ ಎಂ.ಬಿ. |
| ತಂದೆ/ಗಂಡನ ಹೆಸರು | ಲೇಟ್ ಬೋರೇಗೌಡ |
| ವಯಸ್ಸು | 62 ವರ್ಷ |
| ಕೆಲಸ | ನಿವೃತ್ತ ಎ.ಎಸ್.ಐ |
| ವಾಸಸ್ಥಳ | ಮೈಸೂರು |

ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ

ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಪ್ರಾಸಾ**-1,** ಚಾಸಾ**-3** ಮತ್ತು **4** ಗೊತ್ತು. ದಿಃ **30.04.2018** ರಂದು ನನಗೆ ರಾತ್ರಿ ಪಾಳಿ ಕರ್ತವ್ಯಕ್ಕೆ ನೇಮಕ ಮಾಡಿದ್ದು, ಅದರಂತೆ ಪ್ರಾಸಾ**-1** ರವರೊಂದಿಗೆ ಕೆಎ**-09-326** ವಾಹನದಲ್ಲಿ ಠಾಣೆಯನ್ನು **9.00** ಗಂಟೆಗೆ ಬಿಟ್ಟು ಗಸ್ತಿಗೆ ಹೋಗಿರುತ್ತೇವೆ. ರಾತ್ರಿ **11.30** ಗಂಟೆ ಸಮಯದಲ್ಲಿ ಹೊಸರಾಮೇನಹಳ್ಳಿಯಲ್ಲಿ ಗಸ್ತು ಮಾಡುತ್ತಿದ್ದಾಗ ಮಯಿಕ್ ಸೆಟ್ ಧ್ವನಿ ವರ್ಧಕದ ಶಬ್ದ ಕೇಳಿಸಿತು. ಅಲ್ಲಿ ಚಾಸಾ**-4** ರವರ ತಾಯಿಯಾದ ಸಿದ್ದಮ್ಮ ರವರು ಮೃತಪಟ್ಟಿದ್ದು, ಅವರ **11** ನೇ ಕಾರ್ಯದ ಹರಿಕಥೆ ಮಾಡುತ್ತಿದ್ದರು. ಅಲ್ಲೇ ಇದ್ದ **1** ನೇ ಆರೋಪಿ ಏಕವಚನದಲ್ಲಿ ಬೈದು, ಪ್ರಾಸಾ**-1** ರವರನ್ನು ಹಿಡಿದು ಎಳೆದಾಡಿ, ಕೈಯಿಂದ ಅವರಿಗೆ ಹೊಡೆದಿರುತ್ತಾರೆ. ನಂತರ ಪ್ರಾಸಾ**-1** ರವರು ವಿಡಿಯೋ ಮಾಡುತ್ತಿದ್ದಾಗ ಅಲ್ಲೇ ಇದ್ದ **2** ನೇ ಆರೋಪಿ ಪ್ರಾಸಾ**1** ರವರಿಗೆ ಏಕವಚನದಲ್ಲಿ ಬೈದಿರುತ್ತಾರೆ. ಇದರಿಂದ ನಮ್ಮ ಸರ್ಕಾರಿ ಕೆಲಸಕ್ಕೆ ಅಡ್ಡಿಯಾಗಿರುತ್ತದೆ. ಸದರಿ ಬಗ್ಗೆ ಪ್ರಾಸಾ**-1** ರವರು ದೂರು ನೀಡಿರುತ್ತಾರೆ. ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ.

ಪಾಟೀಸವಾಲು ಆರೋಪಿತರ ಪರ ಶ್ರೀ **V.G.M.** ವಕೀಲರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಅವರ ಹೆಸರಿನಿಂದ ಗುರುತಿಸಲು ಕೇಳಲಾಗಿ,

ಸಾಕ್ಷಿ ಚೌಡಪ್ಪನನ್ನು ಪ್ರಭಾಕರ ಎಂದು ಗುರುತಿಸಿರುತ್ತಾರೆ. ಘಟನೆ ನಡೆಯಿತು ಎಂದು ಹೇಳುವ ದಿನದಂದು ಗಸ್ತು ರಾತ್ರಿ **9.00** ಗಂಟೆಯಿಂದ ಬೆಳಿಗ್ಗೆ **5.00** ಗಂಟೆಯವರೆಗೆ ಇರುತ್ತದೆ, ಅದರಂತೆ ನಾವು ಬಿಳಿಕೆರೆ ಪೊಲೀಸ್ ಠಾಣೆಯನ್ನು **9.00** ಗಂಟೆಗೆ ಬಿಟ್ಟಿರುತ್ತೇವೆ. ಠಾಣೆಯಿಂದ ಹೊರಡುವಾಗ ನಾನು, ಪ್ರಾಸಾ-**1** ಮತ್ತು ಚಾಸಾ-**3** ರವರು ಇದ್ದೇವು. ಸಾಮಾನ್ಯವಾಗಿ ಗಸ್ತು ಮಾಡಲು ನಿಮಗೆ ಗ್ರಾಮ ಮತ್ತು ಮಾರ್ಗಗಳ ಪಟ್ಟಿಯನ್ನು ನೀಡಿರುತ್ತಾರೆಂದರೆ ಸಾಕ್ಷಿ ಹೋಬಳಿಗಳ ಪಟ್ಟಿಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ಠಾಣೆಯನ್ನು ಬಿಟ್ಟು ಆಯರಹಳ್ಳಿ, ತೆಂಕಲಕೊಪ್ಪಲು, ಬೊಳನಹಳ್ಳಿ ಮಾರ್ಗವಾಗಿ ಹೋಗಿ ಹೊಸರಾಮೇನಹಳ್ಳಿಗೆ ಹೋಗಿರುತ್ತೇವೆ. ಬಿಳಿಕೆರೆ ಠಾಣೆಯಿಂದ ಸದರಿ ಮಾರ್ಗಗಳು ಸುಮಾರು **15** ಕಿ.ಮೀ ದೂರ ಆಗುತ್ತವೆ. ಗಸ್ತಿಗೆ ಹೋಗುವಾಗ ಮಾರ್ಗದ ಮಧ್ಯದಲ್ಲಿ ವಾಹನವನ್ನು ತೆಂಕಲಕೊಪ್ಪಲು ಊರಿನ ಮಧ್ಯ ಭಾಗದಲ್ಲಿ ನಿಲ್ಲಿಸಿರುತ್ತೇವೆ. ಆಯರಹಳ್ಳಿಯ ಶಾಲೆಯ ಹತ್ತಿರ ಇರುವ ಅರಳಿಮರದ ಬಳಿ ನಿಲ್ಲಿಸಿರುತ್ತೇವೆ. ಸದರಿ ಮಾರ್ಗಗಳು ಕೇವಲ **9** ಕಿ.ಮೀ ಆಗುತ್ತವೆ ಎಂದರೆ ಸರಿಯಲ್ಲ. ಸದರಿ ಮಾರ್ಗಗಳಿಗೆ ಹೋಗಲು ರಸ್ತೆ ಚೆನ್ನಾಗಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಳ್ಳ ದಿಬ್ಬುಗಳು ಇವೆ ಎಂದು ನುಡಿಯುತ್ತಾರೆ. ಇಲಾಖಾ ವಾಹನವು ಎಷ್ಟು ವೇಗದಲ್ಲಿ ಚಲಿಸುತ್ತಿತ್ತು ಎಂದು ಹೇಳಲಾಗುವುದಿಲ್ಲ. ಠಾಣೆಯಿಂದ ಆಯರಹಳ್ಳಿ, ತೆಂಕಲಕೊಪ್ಪಲು, ಬೊಳನಹಳ್ಳಿ ಮಾರ್ಗವಾಗಿ ಹೊಸರಾಮೇನಹಳ್ಳಿಗೆ ಹೋಗಲು ಒಂದೂವರೆ ಗಂಟೆ ತಗಲುತ್ತದೆ ಎಂದರೆ ಸರಿಯಲ್ಲ. ಮಯಿಕ್ ಶಬ್ದ ಕೇಳಿತು ಎಂದು ಹೇಳಿದ್ದು, ಆ ಸಮಯದಲ್ಲಿ ನಾವು ಹೊಸರಾಮೇನಹಳ್ಳಿ ಬಸ್ ನಿಲ್ದಾಣದ ಬಳಿ ಹೋಗುತ್ತಿದ್ದೇವು. ಇಲಾಖಾ ವಾಹನ ಚಲಿಸುವಾಗ ವಾಹನದ ಒಳಗಡೆ ಶಬ್ದ ಇರುತ್ತದೆಂದರೆ ಸರಿ. ವಾಹನವನ್ನು ಹೊಸರಾಮೇನಹಳ್ಳಿ ಬಸ್ ನಿಲ್ದಾಣದ ಬಳಿ ನಿಲ್ಲಿಸಿರುವುದಿಲ್ಲ, ವಾಹನ ಸಾಗುತ್ತಿತ್ತು. ಹೊಸರಾಮೇನಹಳ್ಳಿ ಬಸ್ ನಿಲ್ದಾಣದಿಂದ ಘಟನೆ ನಡೆಯಿತು ಎಂದು ಹೇಳುವ ಸ್ಥಳ ಸುಮಾರು **200** ಮೀ ಆಗುತ್ತದೆ.

ವಾಹನ ಚಲಿಸುತ್ತಿದ್ದಾಗ ತೀರಾ ದೊಡ್ಡ ಶಬ್ದ ಮಾತ್ರ ಕೇಳಿಸುತ್ತದೆ, **200** ಮೀ ದೂರದ ಶಬ್ದ ಕೇಳಿಸುವುದಿಲ್ಲ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋದಾಗ ಸುಮಾರು **20-25** ಜನ ಇದ್ದರು. ಸ್ಥಳದಲ್ಲಿ ಶಾಮಿಯಾನ ಹಾಕಿದ್ದರು. ದೀಪ ಉರಿಯುತ್ತಿತ್ತು. ವಾಹನವನ್ನು ನಿಲ್ಲಿಸಿ ಚುನಾವಣಾ ಸಂಹಿತೆ ಇರುವುದರಿಂದ ಮಯಿಕ್ ಸೆಟ್ ಹಾಕಿದ್ದನ್ನು ಕೇಳಲು ಮೊದಲು ನಾನೇ ಹೋದಾಗ ನಮ್ಮ ಬಳಿ ಚಾಸಾ-**4** ರವರೇ ಬಂದಿರುತ್ತಾರೆ. ಮಯಿಕ್ ಸೆಟ್ ಬಳಸುವುದು ಕಾನೂನು ಬಾಹಿರ ಎಂದು ಪ್ರಾಸಾ-**1** ರವರು ಜೀಪಿನಿಂದ ಇಳಿದು ಬಂದು ಚಾಸಾ-**4** ರವರಿಗೆ ತಿಳಿಸಿರುತ್ತಾರೆ. ಆಗ ಚಾಸಾ**4** ರವರು ಮಯಿಕ್ ಸೆಟ್ ನ್ನು ಸ್ಥಗಿತಗೊಳಿಸಿರುತ್ತಾರೆ. ಪ್ರಾಸಾ-**1** ರವರಿಗೆ **1** ನೇ ಆರೋಪಿ ಹೊಡೆದಿರುತ್ತಾರೆಂದು ಹೇಳಿದ್ದು, ಯಾವ ಭಾಗಕ್ಕೆ ಹೊಡೆದರು ಎಂದು ನೋಡಿರುವುದಿಲ್ಲ. ಪ್ರಾಸಾ-**1** ರವರು ನನ್ನ ಪಕ್ಕದಲ್ಲೇ **1** ಮೀ ದೂರದಲ್ಲಿ ಇದ್ದರು. ಆರೋಪಿತರು ಅವಾಚ್ಯವಾಗಿ ಬೈದಿರುವುದಿಲ್ಲ, ಪ್ರಾಸಾ-**1** ರವರಿಗೆ ಹೊಡೆದಿರುವುದಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪ್ರಾಸಾ-**1** ರವರು ಹಾಗೂ ನೀವು ಮಯಿಕ್ ಸೆಟ್ ನ್ನು ಸ್ಥಗಿತಗೊಳಿಸಿದಾಗ ಸ್ಥಳದಿಂದ ಹೋಗಬಹುದಾಗಿತ್ತು ಎಂದರೆ ಸಾಕ್ಷಿ ಅಷ್ಟರಲ್ಲಿ ಆರೋಪಿತರು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಇಲಾಖೆಯ ಅಂಕಿಅಂಶಕ್ಕೊಸ್ಕರ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು